ಕರ್ನಾಟಕ ಸರ್ಕಾರ

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

O/o The Chief Engineer,
Quality Assurance Zone,
PWD Annex Building,
5th floor, K.R. Circle,
Bangalore-560 001
Email ID : ceqazone@gmail.com

ಮುಖ್ಯ ಇಂಜಿನಿಯರ್‌ರವರ ಕಛೇರಿ
ಗುಣ ಭರವಸೆ ವಲಯ,
ಲೋಇ ಪೂರಕ ಕಟ್ಟಡ,
5ನೇ ಮಹಡಿ, ಕೆ.ಆರ್.ವೃತ್ತ,
ಬೆಂಗಳೂರು-560 001.
ದೂ.ಸಂಖ್ಯೆ: 080 2224 3232

ಸಂಖ್ಯೆ:ಮುಇಂ/ಗುಭವ/ತಾಂಸ-1/ಸಇಂ-2/2019-20/617 ದಿನಾಂಕ:18-01-2020

ಇವರಿಗೆ, Principal

**Sri Chaitanya Techno School,**
Outer Ring Road service road,
Munnekolala village,
Marathahalli junction,
**Bengaluru.**

ಮಾನ್ಯರೇ,

ವಿಷಯ: ತಮ್ಮ ಶಾಲಾ ಕಟ್ಟಡದ ಸಧೃಡತೆ/ಸುರಕ್ಷತೆ ಬಗ್ಗೆ ಪ್ರಮಾಣ ಪತ್ರ ಕೋರಿರುವ ಕುರಿತು.

ಉಲ್ಲೇಖ:
1) ಈ ಕಛೇರಿ ಪತ್ರ ಸಂಖ್ಯೆ:469 ದಿನಾಂಕ:20-11-2019 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರಿಗೆ ಬರೆದಿರುವ ಪತ್ರ.
2) ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣಾ ಇಲಾಖೆ ಇವರು ಸರ್ಕಾರಕ್ಕೆ ಬರೆದಿರುವ ಪತ್ರ ಸಂಖ್ಯೆ:ಸಿ7(2)ಪ್ರಾಶಿಅ/ಮಾನ್ಯತೆ ಷರತ್ತು/23/2018-19 ದಿನಾಂಕ:30-10-2019. (ಈ ಕಛೇರಿಗೆ ಪ್ರತಿಯನ್ನು ಸಲ್ಲಿಸಲಾಗಿದೆ).
3) ತಮ್ಮ ಪತ್ರ ಈ ಕಛೇರಿಯಲ್ಲಿ ಸ್ವೀಕೃತಗೊಂಡ ದಿನಾಂಕ:31-12-2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (3)ರ ತಮ್ಮ ಪತ್ರದ ಅನುಸಾರ, ತಮ್ಮ ಶಾಲಾ ಕಟ್ಟಡದ ಸಧೃಡತೆ/ಸುರಕ್ಷತೆ ಬಗ್ಗೆ ಪ್ರಮಾಣ ಪತ್ರವನ್ನು ನೀಡುವಂತೆ ವಿನಂತಿಸಿರುತ್ತೀರಿ.

ಸದರಿ ವಿಷಯದ ಕುರಿತು ಉಲ್ಲೇಖ (1)ರ ಪತ್ರದ ಅನುಸಾರ (ಪ್ರತಿ ಲಗತ್ತಿಸಿದೆ), ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ ವಿವರವಾದ ವರದಿಯನ್ನು ಸಲ್ಲಿಸಿ, ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಹಾಗೂ ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆರವರು ವಿನಂತಿಸಿರುವಂತೆ, ಸದರಿ ವಿಷಯದ ಸಂಬಂಧ ತಾಲ್ಲೂಕು/ಜಿಲ್ಲಾ ವ್ಯಾಪ್ತಿಯಲ್ಲಿ ಸಂಬಂಧಿಸಿದ ಪ್ರಾಧಿಕಾರಗಳು ಸೂಕ್ತ ಕ್ರಮ ವಹಿಸಬಹುದಾಗಿದೆಯೆಂದು ವಿನಂತಿಸಲಾಗಿದೆ.

ಕಾರಣ, ತಾವು ಸದರಿ ವಿಷಯದ ಕುರಿತು ಸಂಬಂಧಪಟ್ಟ ಶಿಕ್ಷಣ ಇಲಾಖೆಯನ್ನು ಸಂಪರ್ಕಿಸಿ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಈ ಮೂಲಕ ತಮಗೆ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

18/1

ಮುಖ್ಯ ಇಂಜಿನಿಯರ್
ಗುಣ ಭರವಸೆ ವಲಯ, ಬೆಂಗಳೂರು

ಅಡಕ: ಉಲ್ಲೇಖಿತ (1) ಮತ್ತು (2)ರ ಪತ್ರಗಳ ಪ್ರತಿ

ರವಾನಿಸಲಾಗಿದೆ


ಕರ್ನಾಟಕ ಸರ್ಕಾರ

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

**O/o The Chief Engineer,**
**Quality Assurance**
PWD Annex Building,
5th floor, K.R. Circle,
Bangalore-560 001
Email ID: ceqazone@gmail.com

ಮುಖ್ಯ ಇಂಜಿನಿಯರ್‌ರವರ ಕಛೇರಿ
ಗುಣ ಭರವಸೆ ವಲಯ,
ಲೋಕೋಪಯೋಗಿ ಪೂರಕ ಕಟ್ಟಡ,
5ನೇ ಮಹಡಿ, ಕೆ.ಆರ್.ವೃತ್ತ,
ಬೆಂಗಳೂರು-560 001
ದೂ.ಸಂ:080-22243232


ಸಂ:ಮುಇಂ/ಗುಭವ/ಬೆಂ/ಶಾಂಸ2/ಸಇಂ2/2019-20/ 469 ದಿನಾಂಕ: 20.11.2019

ಇವರಿಗೆ,

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,**
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ
ವಿಕಾಸ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: Royal Public School ಕೊತ್ತನೂರು, ಬೆಂಗಳೂರು ರವರು ತಮ್ಮ ಶಾಲಾ ಕಟ್ಟಡದ ಸುರಕ್ಷತೆ/ಸಧೃಢತೆ ಬಗ್ಗೆ ಪ್ರಮಾಣ ಪತ್ರ ಕೋರಿರುವ ಕುರಿತು.

ಉಲ್ಲೇಖ:
1) ಸರ್ಕಾರದ ಆದೇಶ ಸಂಖ್ಯೆ:ಲೋಇ 243 ಸೇಸಪ 2014 ದಿನಾಂಕ: 22-07-2014.
2) ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಪತ್ರ ಸಂಖ್ಯೆ:ಸಿ7(2) ಪ್ರಾಶಿಅ/ಮಾನ್ಯತೆ ಷರತ್ತು/23/2018-19 ದಿನಾಂಕ: 30-10-2019ರಲ್ಲಿ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಲೋಇ ಬೆಂಗಳೂರು ಇವರಿಗೆ ಪತ್ರ ಬರೆದು, ಪ್ರತಿಯನ್ನು ಈ ಕಛೇರಿಗೆ ಕಳುಹಿಸಿರುತ್ತಾರೆ.
3) ಕಾರ್ಯದರ್ಶಿಗಳು, ರಾಯಲ್ ಪಬ್ಲಿಕ್ ಸ್ಕೂಲ್, ಕೊತ್ತನೂರು, ಬೆಂಗಳೂರು-76 ಇವರ ಪತ್ರ ದಿನಾಂಕ:11-11-2019 ಈ ಕಛೇರಿಗೆ ಸಲ್ಲಿಸಿದ್ದು.
4) ಈ ಕಛೇರಿ ಪತ್ರ ಸಂಖ್ಯೆ:452 ದಿನಾಂಕ:14-11-2019.
5) ಕಾರ್ಯನಿರ್ವಾಹಕ ಇಂಜಿನಿಯರ್, ಗುಣ ಭರವಸೆ ವಿಭಾಗ, ಬೆಂಗಳೂರು ಇವರ ಪತ್ರ ಸಂಖ್ಯೆ:1896 ದಿನಾಂಕ:19-11-2019.
6) ಅಧೀಕ್ಷಕ ಇಂಜಿನಿಯರ್, ಗುಣ ಭರವಸೆ ವೃತ್ತ, ಬೆಂಗಳೂರು ಇವರ ಪತ್ರ ಸಂಖ್ಯೆ:506 ದಿನಾಂಕ:20-11-2019.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (3)ರ ಪತ್ರದಲ್ಲಿ ಕಾರ್ಯದರ್ಶಿಗಳು, Royal Public School No.3523/2182-79, Kothnur, JP Nagar, VIII Phase Bangalore-560076. ಇವರು ತಮ್ಮ ಶಾಲಾ ಕಟ್ಟಡದ ಸುರಕ್ಷತೆ/ಸಧೃಢತೆ ಬಗ್ಗೆ ಪ್ರಮಾಣ ಪತ್ರವನ್ನು ನೀಡಲು [illegible]

ಕಾರ್ಯನಿರ್ವಾಹಕ ಇಂಜಿನಿಯರ್, ಗುಣ ಭರವಸೆ ವಿಭಾಗ, ಬೆಂಗಳೂರು ಹಾಗೂ ಅಧೀಕ್ಷಕ ಇಂಜಿನಿಯರ್, ಗುಣ ಭರವಸೆ ವೃತ್ತ, ಬೆಂಗಳೂರು ಇವರಿಗೆ ತಿಳಿಸಲಾಗಿತ್ತು.

ಈ ವಿಷಯಕ್ಕೆ ಸಂಬಂಧಿಸಿದಂತೆ, ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ಉಲ್ಲೇಖ (2)ರ ಪತ್ರವನ್ನು ತಮ್ಮ ಕಛೇರಿಗೆ ಸಲ್ಲಿಸಿ, ಕೆಳಕಂಡ ಅಂಶಗಳನ್ನು ನಮೂದಿಸಿ, ಇಂತಹ ಕಟ್ಟಡಗಳ ಸುರಕ್ಷತಾ/ಕ್ಲಿಯರೆನ್ಸ್ ಪ್ರಮಾಣ ಪತ್ರ ನೀಡುವ ಬಗ್ಗೆ ತಾಲ್ಲೂಕು/ಜಿಲ್ಲಾ ವ್ಯಾಪ್ತಿಯಲ್ಲಿ ಸಂಬಂಧಿಸಿದ ಪ್ರಾಧಿಕಾರಗಳನ್ನು ರಚಿಸಿ, ಅವರಿಗೆ ಸೂಕ್ತ ನಿರ್ದೇಶನವನ್ನು ನೀಡುವಂತೆ ಕೋರಿರುತ್ತಾರೆ.

i) ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ(ಸಿವಿಲ್) ಸಂಖ್ಯೆ:483/2004ರ ಅವಿನಾಶ್ ಮಲ್ಹೋತ್ರ ವಿರುದ್ಧ ಭಾರತ ಸರ್ಕಾರ ಪ್ರಕರಣ ಸಂಬಂಧ ದಿನಾಂಕ: 13-04-2009ರ ತೀರ್ಪಿನನ್ವಯ ಹೊಸ ಖಾಸಗಿ ಶಾಲೆಗಳಿಗೆ ನೋಂದಣಿ, ಮಾನ್ಯತೆ, ಮಾನ್ಯತೆ ನವೀಕರಣ ಮತ್ತು ಸಂಯೋಜನೆ ನೀಡುವ ಪೂರ್ವದಲ್ಲಿ ಶಾಲಾ ಆಡಳಿತ ಮಂಡಳಿಗಳಿಂದ ಶಾಲಾ ಕಟ್ಟಡವನ್ನು ಭಾರತದ ರಾಷ್ಟ್ರೀಯ ಕಟ್ಟಡ ಸಂಹಿತೆಯಲ್ಲಿನ ನಿಯಮಾವಳಿಗಳನ್ವಯ ಕಟ್ಟಡದ ಸುರಕ್ಷತೆ ಕುರಿತು ಸಕ್ಷಮ ಪ್ರಾಧಿಕಾರದಿಂದ ಪಡೆದ ದೃಢೀಕರಣ ಹಾಗೂ ಅಗ್ನಿನಂದಕ ಉಪಕರಣಗಳನ್ನು ಅಳವಡಿಸಿದ್ದು, ತುರ್ತು ಪರಿಸ್ಥಿತಿಯಲ್ಲಿ ಸದರಿ ಉಪಕರಣದ ಬಳಕೆ ಕುರಿತು ತರಬೇತಿ ಪಡೆದಿರುವ ಬಗ್ಗೆ ದೃಢೀಕರಣ ಮತ್ತು ಶಾಲೆಯ ಆವರಣವು ಎಲ್ಲಾ ರೀತಿಯ ಅಗ್ನಿ ದುರಂತಗಳಿಂದ ಹಾಗೂ ವಿಷಯುಕ್ತ ಪದಾರ್ಥಗಳಿಂದ ಮುಕ್ತಿ ಹೊಂದಿರುವ ಬಗ್ಗೆ ಪರಿಶೀಲಿಸಿ ದೃಢೀಕರಿಸುವುದು ಎಂದು ದಿನಾಂಕ:13-04-2009ರ ತೀರ್ಪಿನನ್ವಯ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ದೇಶನ ನೀಡಿರುತ್ತದೆ.

ii) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಲ್ಲಿ ಕೆಳಕಂಡಂತೆ ನಿರ್ದೇಶಿಸಿರುತ್ತಾರೆ.

Evaluation of structural aspect of the school may be carried out periodically. We direct that the concerned engineers and officials must strictly follow the National Building Code. The safety certificate be issued only proper inspection. Dereliction in duty must attract immediate disciplinary action against the concerned officials.

ಮುಂದುವರೆದು, ಉಲ್ಲೇಖ (1)ರ ಸರ್ಕಾರದ ಆದೇಶದಂತೆ ಗುಣ ಭರವಸೆ ವಲಯಗಳಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳ ಕಾರ್ಯನಿರ್ವಹಣೆ ಮತ್ತು ಹೊಣೆಗಾರಿಕೆ ಸಂಬಂಧ ಹೊರಡಿಸಲಾದ, ಆದೇಶದಲ್ಲಿ, ಆಯಾ ವಲಯದ ಭೌಗೋಳಿಕ ಪ್ರದೇಶದ ವ್ಯಾಪ್ತಿಯಲ್ಲಿ, ಲೋಕೋಪಯೋಗಿ ಇಲಾಖೆಯು ಕೈಗೊಳ್ಳುವ, ರಸ್ತೆ, ಸೇತುವೆ, ಕಟ್ಟಡ, ಇತ್ಯಾದಿ ಕಾಮಗಾರಿಗಳ ನಿರ್ಮಾಣವು, ನಿಗದಿತ ಗುಣಮಟ್ಟಕ್ಕೆ ಅನುಗುಣವಾಗಿ, ಗುತ್ತಿಗೆ ಕರಾರಿನಲ್ಲಿನ ವಿಶಿಷ್ಟ ವಿವರಣೆಗಳನ್ವಯ ಇರುವುದೇ? ಎಂಬುದನ್ನು ಪರಿಶೀಲನೆ ನಡೆಸುವ ಹಾಗೂ ತಾಂತ್ರಿಕ ಸಲಹೆ, ಸೂಚನೆ, ಮಾರ್ಗದರ್ಶನ ನೀಡುವ ಮತ್ತು ಇನ್ನಿತರ ಅಂಶಗಳ

ಜವಾಬ್ದಾರಿಯನ್ನು ಈ ವಲಯದಡಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವರ್ಗದ ಅಧಿಕಾರಿಗಳಿಗೆ ಸರ್ಕಾರವು ನೀಡಿರುವ ಜೊತೆಗೆ, ಇದಲ್ಲದೆ ಸರ್ಕಾರದಿಂದ ವಹಿಸಲ್ಪಟ್ಟ/ಸೂಚಿಸಲ್ಪಟ್ಟ ಇತರೆ/ಬೇರೆ ಯಾವುದೇ ನಿರ್ದಿಷ್ಟ ಕಾಮಗಾರಿ ಯೋಜನೆಯಡಿಯಲ್ಲಿನ ಕಾಮಗಾರಿಗಳ ಗುಣಮಟ್ಟದ ಬಗ್ಗೆಯೂ ಕೂಡ, ಸರ್ಕಾರದ ನಿರ್ದೇಶನದಂತೆ ಕ್ರಮ ವಹಿಸಬೇಕಾಗಿರುತ್ತದೆ.

ಪ್ರಸ್ತಾಪಿತ ವಿಷಯಕ್ಕೆ ಕುರಿತಂತೆ ಉಲ್ಲೇಖ (5) ಮತ್ತು (6)ರ ಪತ್ರಗಳಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್, ಗುಣ ಭರವಸೆ ವಿಭಾಗ, ಬೆಂಗಳೂರು ಹಾಗೂ ಅಧೀಕ್ಷಕ ಇಂಜಿನಿಯರ್, ಗುಣ ಭರವಸೆ ವೃತ್ತ, ಬೆಂಗಳೂರು ಇವರು "ಬಿ.ಬಿ.ಎಂ.ಪಿ/ಬಿ.ಡಿ.ಎ ಹಾಗೂ ಇತರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನೂರಾರು ಈ ತರಹದ ಶಾಲಾ ಸಂಸ್ಥೆಗಳಿದ್ದು, ಈ ತರಹದ ಶಾಲಾ ಸಂಸ್ಥೆಗಳಿಗೆ ಕಟ್ಟಡದ ನಕ್ಷೆ, ಮಂಜೂರಾತಿ ಮತ್ತು ಇತರ ಅಂಶಗಳ ಬಗ್ಗೆ ಬಿ.ಬಿ.ಎಂ.ಪಿ/ಬಿ.ಡಿ.ಎ ಅನುಮೋದನೆ ನೀಡುತ್ತಿರುವುದು ಕಂಡುಬಂದಿದ್ದು, ಈ ಹಿನ್ನೆಲೆಯಲ್ಲಿ, ಬಿ.ಬಿ.ಎಂ.ಪಿ/ಬಿ.ಡಿ.ಎ ವ್ಯಾಪ್ತಿಯಲ್ಲಿನ ಈ ತರಹದ ಸಂಸ್ಥೆಗಳಿಗೆ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಕ್ರಮ ವಹಿಸಲು ತಿಳಿಸಬಹುದಾಗಿದೆ" ಎಂಬುದಾಗಿ ತಿಳಿಸುತ್ತಾ ಹಾಗೂ ಪ್ರಮುಖವಾಗಿ ಉಲ್ಲೇಖ (1)ರ ಸರ್ಕಾರದ ಆದೇಶದನ್ವಯ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿನ ಗುಣ ಭರವಸೆ ವೃತ್ತ, ಬೆಂಗಳೂರು ವೃತ್ತ ವ್ಯಾಪ್ತಿಗೆ, ಬೆಂಗಳೂರು ಜಿಲ್ಲೆ ಸೇರಿದಂತೆ ಒಟ್ಟು 8 ಜಿಲ್ಲೆಗಳ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿನ ಕಾಮಗಾರಿಗಳ ಗುಣ ಭರವಸೆ ಜಾರಿಗೊಳಿಸುವ ಕಾರ್ಯವಿದ್ದು, ಕಾರ್ಯಒತ್ತಡ ಬಹಳ ಇರುವುದರಿಂದ, ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ ಇಂತಹ ಬಹಳಷ್ಟು ಪ್ರಕರಣಗಳು ಉದ್ಭವಿಸುವ ಸಾಧ್ಯತೆ ಇದ್ದು, ಇಂತಹ ಖಾಸಗಿ ನಿರ್ಮಿತ ಕಟ್ಟಡಕ್ಕೆ ಸುರಕ್ಷತೆ/ಸಧೃಢತೆ ಪ್ರಮಾಣ ಪತ್ರವನ್ನು ಒದಗಿಸುವುದು ಕಷ್ಟಸಾಧ್ಯವಾಗುವ ಹಿನ್ನೆಲೆಯಲ್ಲಿ, ಈ ಪ್ರಕ್ರಿಯೆಯನ್ನು ಉಲ್ಲೇಖ (2)ರಲ್ಲಿ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ವಿನಂತಿಸಿರುವಂತೆ ಪ್ರಾಥಮಿಕ ಮತ್ತು ಪ್ರೌಢಶಾಲಾ ಆಡಳಿತ ಮಂಡಳಿಗಳಿಗೆ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ/ಕ್ಲಿಯರೆನ್ಸ್ ಪ್ರಮಾಣ ಪತ್ರ ನೀಡುವ ಬಗ್ಗೆ ತಾಲ್ಲೂಕು/ಜಿಲ್ಲಾ ವ್ಯಾಪ್ತಿಯಲ್ಲಿ ಸಂಬಂಧಿಸಿದ ಪ್ರಾಧಿಕಾರಗಳನ್ನು ರಚಿಸಿ ಕ್ರಮವಹಿಸಲು ಕೋರಿರುತ್ತಾರೆ.

ಮುಂದುವರೆದು, ಉಲ್ಲೇಖ (1)ರ ಸರ್ಕಾರದ ಆದೇಶದಂತೆ, ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಿಗೆ ಗುಣ ಭರವಸೆ ಕಾರ್ಯವಿಧಾನ ಅನುಷ್ಠಾನಗೊಳಿಸುವ ಜವಾಬ್ದಾರಿಯ ಜೊತೆಗೆ, ಸರ್ಕಾರದ ನಿರ್ದಿಷ್ಟ ನಿರ್ದೇಶನದಂತೆ ಅನುಷ್ಠಾನಗೊಳ್ಳುತ್ತಿರುವ/ಅನುಷ್ಠಾನಗೊಂಡಿರುವ ಕಾಮಗಾರಿಗಳ ಕುರಿತು ಸಾರ್ವಜನಿಕರಿಂದ /ಜನಪ್ರತಿನಿಧಿಗಳಿಂದ ಬರುವ ದೂರು ದುಮ್ಮಾನಗಳ ಬಗ್ಗೆ ಸಹ ಪರಿವೀಕ್ಷಣೆ

ಹೆಚ್ಚಾಗುತ್ತಿದ್ದು, ಇಂತಹ ಪೂರ್ಣಗೊಂಡ ಖಾಸಗಿ ನಿರ್ಮಿತ ಕಟ್ಟಡಕ್ಕೆ ಸುರಕ್ಷತೆ/ಸಧೃಢತೆ ಪ್ರಮಾಣ ಪತ್ರವನ್ನು ಈ ಗುಣ ಭರವಸೆ ವಲಯದಿಂದ ಒದಗಿಸುವುದು ಕಷ್ಟಸಾಧ್ಯವಾಗಿರುತ್ತದೆ.

ಮೇಲಿನ ಕಂಡಿಕೆಗಳಲ್ಲಿ ವಿವರಿಸಿದಂತೆ, Royal Public School ಕಟ್ಟಡವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಡಿ ಬರುತ್ತಿದ್ದು, ಸರ್ವೋಚ್ಛ ನ್ಯಾಯಲಯದ ಆದೇಶದಂತೆ ಹಾಗೂ ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆರವರು ವಿನಂತಿಸಿರುವಂತೆ, ಸದರಿ ವಿಷಯದ ಸಂಬಂಧ ತಾಲ್ಲೂಕು/ಜಿಲ್ಲಾ ವ್ಯಾಪ್ತಿಯಲ್ಲಿ ಸಂಬಂಧಿಸಿದ ಪ್ರಾಧಿಕಾರಗಳು ಸೂಕ್ತ ಕ್ರಮ ವಹಿಸಬಹುದಾಗಿದೆಯೆಂದು ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,
ಸಹಿ/-
ಮುಖ್ಯ ಇಂಜಿನಿಯರ್

ಅಡಕ: ಉಲ್ಲೇಖ(2)ಮತ್ತು(3)ರ ಪತ್ರಗಳ ಪ್ರತಿ

ಪ್ರತಿಯನ್ನು ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

ಪ್ರತಿಯನ್ನು:-

1) ಅಧೀಕ್ಷಕ ಇಂಜಿನಿಯರ್, ಗುಣ ಭರವಸೆ ವೃತ್ತ, ಬೆಂಗಳೂರು
2) ಕಾರ್ಯಪಾಲಕ ಇಂಜಿನಿಯರ್, ಗುಣ ಭರವಸೆ ವಿಭಾಗ, ಬೆಂಗಳೂರು

-ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

20/x/

ಮುಖ್ಯ ಇಂಜಿನಿಯರ್
ಗುಣ ಭರವಸೆ ವಲಯ
o/c ಬೆಂಗಳೂರು

ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.

ಸಂಖ್ಯೆ :ಸಿ7(2)ಪ್ರಾಶಿಅ/ಮಾನ್ಯತೆ ಷರತ್ತು/23/2018-19 ದಿನಾಂಕ: 30.10.2019

ರವರಿಗೆ,
ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ,
ಲೋಕೋಪಯೋಗಿ,ಒಳನಾಡು,ಬಂದರು ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560 001.

ಮಾನ್ಯರೇ,

ವಿಷಯ: ಖಾಸಗಿ ಪ್ರಾಥಮಿಕ ಶಾಲಾ ಶಿಕ್ಷಣ ಸಂಸ್ಥೆಗಳಿಗೆ ಸಂಯೋಜನೆ ಅಥವಾ ಮಾನ್ಯತೆ ನೀಡುವ ಆದೇಶಗಳಲ್ಲಿನ ಷರತ್ತುಗಳ ಬಗ್ಗೆ.

ಉಲ್ಲೇಖ:
1. ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ:483/2014, ದಿನಾಂಕ:13-04-2009.
2. ಸರ್ಕಾರದ ಅಧಿಸೂಚನೆ ಸಂಖ್ಯೆ-3: ಇಡಿ 709 ಪಿಜಿಸಿ 2018, ದಿನಾಂಕ:07-03-2018
3. ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ7(2)ಪ್ರಾಶಿಅ/ಹೊಶಾನೋಂ/85/2017-18, ದಿನಾಂಕ:26-03-2018
4. ಸರ್ಕಾರದ ಆದೇಶ ಸಂಖ್ಯೆ: ಇಡಿ 587 ಪಿಜಿಸಿ 2018,ದಿನಾಂಕ:19-11-2018.
5. ಈ ಕಛೇರಿ ಸಮ ಪತ್ರದ ಸುತ್ತೋಲೆ ದಿನಾಂಕ:30.11.2018.
6. ಕಾರ್ಯದರ್ಶಿಗಳು, ರಾಯಲ್ ಪಬ್ಲಿಕ್ ಸ್ಕೂಲ್, ನಂ.3523/2182-76, ಜೆ.ಪಿ.ನಗರ, ಕೊತ್ತನೂರು, ಬೆಂಗಳೂರು-76 ಇವರ ಪತ್ರದ ದಿನಾಂಕ:23-10-2019

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ(ಸಿವಿಲ್) ಸಂಖ್ಯೆ:483/2004ರ ಅವಿನಾಶ್ ಮಲ್ಹೋತ್ರ ವಿರುದ್ಧ ಭಾರತ ಸರ್ಕಾರ ಪ್ರಕರಣ ಸಂಬಂಧ ದಿನಾಂಕ:13-04-2009ರ ತೀರ್ಪಿನನ್ವಯ ಹೊಸ ಖಾಸಗಿ ಶಾಲೆಗಳಿಗೆ ನೋಂದಣಿ, ಮಾನ್ಯತೆ, ಮಾನ್ಯತೆ ನವೀಕರಣ ಮತ್ತು ಸಂಯೋಜನೆ ನೀಡುವ ಪೂರ್ವದಲ್ಲಿ ಶಾಲಾ ಆಡಳಿತ ಮಂಡಳಿಗಳಿಂದ ಶಾಲಾ ಕಟ್ಟಡವನ್ನು ಭಾರತದ ರಾಷ್ಟ್ರೀಯ ಕಟ್ಟಡ ಸಂಹಿತೆಯಲ್ಲಿನ ನಿಯಮಾವಳಿಗಳನ್ವಯ ಕಟ್ಟಡದ ಸುರಕ್ಷತೆ ಕುರಿತು ಸಕ್ಷಮ ಪ್ರಾಧಿಕಾರದಿಂದ ಪಡೆದ ದೃಢೀಕರಣ ಹಾಗೂ ಅಗ್ನಿನಂದಕ ಉಪಕರಣಗಳನ್ನು ಅಳವಡಿಸಿದ್ದು, ತುರ್ತು ಪರಿಸ್ಥಿತಿಯಲ್ಲಿ ಸದರಿ ಉಪಕರಣದ ಬಳಕೆ ಕುರಿತು ತರಬೇತಿ ಪಡೆದಿರುವ ಬಗ್ಗೆ ದೃಢೀಕರಣ ಮತ್ತು ಶಾಲೆಯ ಆವರಣವು ಎಲ್ಲಾ ರೀತಿಯ ಅಗ್ನಿ ದುರಂತಗಳಿಂದ ಹಾಗೂ ವಿಷಯುಕ್ತ ಪದಾರ್ಥಗಳಿಂದ ಮುಕ್ತಿ ಹೊಂದಿರುವ ಬಗ್ಗೆ ಪರಿಶೀಲಿಸಿ ದೃಢೀಕರಿಸುವುದು ಎಂದು ಉಲ್ಲೇಖ(1)ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ದೇಶನ ನೀಡಿರುತ್ತದೆ.[ಪ್ರತಿ ಲಗತ್ತಿಸಿದೆ].

ಸರ್ಕಾರವು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಹೊಸ ಖಾಸಗಿ ಪ್ರಾಥಮಿಕ ಶಾಲಾ ಶಿಕ್ಷಣ ಸಂಸ್ಥೆಗಳನ್ನು ಮಂಜೂರು ಮಾಡುವ ಆದೇಶದಲ್ಲಿ ವಿಧಿಸುತ್ತಿರುವ "ಒಂದು ವರ್ಷದೊಳಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳುವುದಾಗಿ ಸಂಬಂಧಪಟ್ಟ ಸಂಸ್ಥೆಯಿಂದ ಮುಚ್ಚಳಿಕೆ ಪತ್ರ ಪಡೆದು ಅನುಮತಿ [illegible]" ಎಂಬ ಷರತ್ತನ್ನು [illegible] "ಖಾಸಗಿ ಪ್ರಾಥಮಿಕ ಶಾಲಾ ಕಟ್ಟಡದಲ್ಲಿ ಎಲ್ಲಾ ಸುರಕ್ಷತಾ ಕ್ರಮಗಳನ್ನು ಅಳವಡಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಂಡೇ ಮಾನ್ಯತೆ ನೀಡತಕ್ಕದ್ದು" ಎಂಬ ಷರತ್ತನ್ನು ಅಳವಡಿಸುವಂತೆ ಉಲ್ಲೇಖ (4)ರ ಸರ್ಕಾರದ ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಅದರಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ), ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಉಲ್ಲೇಖ(5) ರಂತೆ ಸುತ್ತೋಲೆಯನ್ನು ಹೊರಡಿಸಲಾಗಿದೆ. [ಪ್ರತಿ ಲಗತ್ತಿಸಿದೆ]

ಸರ್ಕಾರದ ಆದೇಶ ಸಂಖ್ಯೆ: ಇಡಿ 587 ಪಿಜಿಸಿ 2018, ದಿನಾಂಕ:19-11-2018ರಲ್ಲಿ ಸೂಚಿಸಿರುವ ಪ... ಸೂಚನೆಗಳನ್ನು ಪಾಲಿಸುತ್ತಾ, ಶಾಲೆಗಳಿಗೆ ನೊಂದಣಿ, ಮಾನ್ಯತೆ, ಮಾನ್ಯತೆ ನವೀಕರಣ ಮತ್ತು ಸಂಯೋಜನೆಗೆ ಪ್ರಸ್ತಾವನೆ ಸಲ್ಲಿಸುವ ಸಂದರ್ಭದಲ್ಲಿ ಕೆಳಕಂಡ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

ಉಲ್ಲೇಖ [6] ರಂತೆ ಕಾರ್ಯದರ್ಶಿಗಳು, ರಾಯಲ್ ಪಬ್ಲಿಕ್ ಸ್ಕೂಲ್, ನಂ.3523/2182-76, ಜೆ.ಪಿ.ನಗರ, ಕೊತ್ತನೂರು, ಬೆಂಗಳೂರು-76 ಇವರು ಕಟ್ಟಡ ಸುರಕ್ಷತೆ ಬಗ್ಗೆ ದೃಢೀಕರಣವನ್ನು ಪಡೆಯಲು ಮುಖ್ಯ ಇಂಜಿನಿಯರ್, ಗುಣಮಟ್ಟ ಮತ್ತು ನಿಯಂತ್ರಣ, ಕೆ.ಆರ್.ವೃತ್ತ, ಬೆಂಗಳೂರು ಇವರನ್ನು ಸಂಪರ್ಕಿಸಿದಾಗ, ಅರ್ಜಿಯನ್ನು ನಿಮ್ಮಿಂದ ಸ್ವೀಕರಿಸಬೇಕು ಎಂಬುದಾಗಿ ಸರ್ಕಾರದಿಂದ ನಮಗೆ ನಿರ್ದೇಶಿಸಲಾಗಿದೆ ಎಂದು ತಿಳಿಸಿ ನಮ್ಮ ಮನವಿಯನ್ನು ಮುಖ್ಯ ಇಂಜಿನಿಯರ್, ಗುಣಮಟ್ಟ ನಿಯಂತ್ರಣಾ ಇವರಿಗೆ ಗುರುತಿಸಿ ಅಗತ್ಯ ಪ್ರಮಾಣ ಪತ್ರವನ್ನು ನೀಡುವಂತೆ ಸಲಹೆ ನೀಡಿರುತ್ತಾರೆ ಎಂಬುದಾಗಿ ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ಅಗತ್ಯವಾದ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ಪಡೆಯಲು ನಮಗೆ ಅನುವು ಮಾಡಿಕೊಡುವಂತೆ, ಪತ್ರವನ್ನು ನೀಡುವಂತೆ ಕೋರಿರುತ್ತಾರೆ. [ಪ್ರತಿ ಲಗತ್ತಿಸಿದೆ].

ಆದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಲ್ಲಿ ಕೆಳಕಂಡಂತೆ ನಿರ್ದೇಶಿಸಲಾಗಿದೆ.

**(iv) Evaluation of structural aspect of the school may be carried out periodically. We direct that the concerned engineers and officials must strictly follow the National Building Code. The safety certificate be issued only proper inspection. Dereliction in duty must attract immediate disciplinary action against the concerned officials.** [ಪ್ರತಿ ಲಗತ್ತಿಸಿದೆ].

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಆಡಳಿತ ಮಂಡಳಿಗಳಿಗೆ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ / ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡುವ ಬಗ್ಗೆ ತಾಲ್ಲೂಕು/ ಜಿಲ್ಲಾ ವ್ಯಾಪ್ತಿಯಲ್ಲಿ ಸಂಬಂಧಿಸಿದ ಪ್ರಾಧಿಕಾರಗಳನ್ನು ರಚಿಸಿ ಅವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

(ಎಂ.ಪಿ.ಮಾದೇಗೌಡ)
ನಿರ್ದೇಶಕರು[ಪ್ರಾಥಮಿಕ ಶಿಕ್ಷಣ]
ಸಾರ್ವಜನಿಕ ಶಿಕ್ಷಣ ಇಲಾಖೆ.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ತಾಲ್ಲೂಕು / ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ / ಅನುದಾನರಹಿತ ಶಾಲೆಗಳ ಮುಖ್ಯಸ್ಥರುಗಳಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು:

1. ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ವಿಭಾಗ, ಧಾರವಾಡ ಇವರಿಗೆ ಮಾಹಿತಿಗಾಗಿ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ, ಕಲಬುರಗಿ ಇವರಿಗೆ ಮಾಹಿತಿಗಾಗಿ.
4. ಮುಖ್ಯ ಇಂಜಿನಿಯರ್, ಗುಣಮಟ್ಟ ಮತ್ತು ನಿಯಂತ್ರಣಾ ವಿಭಾಗ, ಲೋಕೋಪಯೋಗಿ ಇಲಾಖೆ, ಕೆ.ಆರ್.ವೃತ್ತ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
5. ಕಾರ್ಯದರ್ಶಿಗಳು,ರಾಯಲ್ ಪಬ್ಲಿಕ್ ಸ್ಕೂಲ್, ನಂ.3523/2182-76, ಜೆ.ಪಿ.ನಗರ, ಕೊತ್ತನೂರು, ಬೆಂಗಳೂರು-76.
6. ಕಛೇರಿ ಪ್ರತಿ.

<u>ಕರ್ನಾಟಕ ಸರ್ಕಾರ</u>

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಲೋ.ಇ.,ಗುಣ ಭರವಸೆ ವಿಭಾಗ
ಬೆಂಗಳೂರು.

<u>ಸಂಖ್ಯೆ:ಕಾಇಂ:ಗುಭವಿ:ಲೋಇಇ:ಬೆಂ:ಎಇ-1:ಇತರೆ(ಖಾಸಗಿ ಶಾಲೆ ದೃ.ಪ.)-01:2019 2366 ದಿನಾಂಕ:</u> 13-1-2020

ಪ್ರಾಂಶುಪಾಲರು
ಶ್ರೀ ಚೈತನ್ಯ ಟೆಕ್ನೋ ಸ್ಕೂಲ್
outer ring service road
Munneekolala village
Marathahalli junction
ಬೆಂಗಳೂರು.

ಮಾನ್ಯರೇ,

ವಿಷಯ: ಶಾಲಾ ಕಟ್ಟಡಕ್ಕೆ "safety certificate" ನೀಡಲು ಕೋರಿಕೆ.
ಉಲ್ಲೇಖ: ತಮ್ಮ ಪತ್ರ,ಸಂ ಇಲ್ಲ ದಿನಾಂಕ: ಇಲ್ಲ

----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಪತ್ರದಲ್ಲಿ outer ring service road, Munneekolala village,Marathahalli junction,ಬೆಂಗಳೂರುನಲ್ಲಿರುವ ಶ್ರೀ ಚೈತನ್ಯ ಟೆಕ್ನೋ ಸ್ಕೂಲ್ ನಡೆಸಲು ಸಿ.ಬಿ.ಎಸ್.ಇ. ಯಿಂದ ಅನುಮತಿ ಪಡೆಯಲು ಸದರಿ ಶಾಲೆ ಕಟ್ಟಡಕ್ಕೆ "safety certificate" ನೀಡಲು ಕೋರಲಾಗಿದೆ.

ಈ ಕುರಿತು ತಮ್ಮ ಗಮನಕ್ಕೆ ತರುವುದೇನೆಂದರೆ, ಮೇಲಿನ ವಿಷಯವು ಗುಣ ಭರವಸೆ ವಲಯದ ಕಾರ್ಯ ವ್ಯಾಪ್ತಿಗೆ ಹೊರತಾಗಿರುವುದರಿಂದ ಕಾರ್ಯಪಾಲಕ ಇಂಜಿನಿಯರ್,ಲೋ.ಇ. ವಿಭಾಗ, ಬೆಂಗಳೂರು-ರವರನ್ನು ಸಂಪರ್ಕಿಸಬಹುದಾಗಿದೆ.

ತಮ್ಮ ವಿಶ್ವಾಸಿ

ಕಾರ್ಯಪಾಲಕ ಇಂಜಿನಿಯರ್
ಲೋ.ಇ.,ಗುಣ ಭರವಸೆ ವಿಭಾಗ
ಬೆಂಗಳೂರು.

10/1